ISSN: 2582-2284

ಸಂಪುಟ 1 ಸಂಚಿಕೆ 6 ಮೇ–ಜೂನ್ 2020

# ಪ್ರತಿಬಿಂಬ

## MULTIDISCIPLINARY KANNADA RESEARCH JOURNAL OF IIMRD

**Peer Reviewed and Referred Kannada Journal**

IIMRD JOURNALS

ಭಾರತೀಯ ಬಹುಶಿಸ್ತೀಯ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ
ಮೈಸೂರು

| Sl. No. | ಅನುಕ್ರಮಣಿಕೆ | ಪು.ಸಂ. |
|---|---|---|
| 1. | ಕೆರೆಗೆ ಹಾರವಾದ ಹುಳಿಯಾರು ಕೆಂಚಮ್ಮ – ಅನಿತ ಟಿ<br>– ಡಾ. ನಾಗರತ್ನಮ್ಮ ಎಸ್ | 1–11 |
| 2. | ವಲಸೆ ಮತ್ತು ಮಹಿಳೆಯರ ಸಮಸ್ಯೆಗಳು: ಆಯ್ದ ಸಿನಿಮಾಗಳ ಅವಲೋಕನ<br>– ವಿಜಯಾ ಯು ಪಾಟೀಲ | 12–18 |
| 3. | ಹಿರೇಗುಂಟನೂರು ಪರಿಸರದ ಸಾಂಸ್ಕೃತಿಕ ಆಚರಣೆಗಳು: ಐತಿಹಾಸಿಕ ಅವಲೋಕನ<br>– ಡಾ. ವಿ. ನಾಗರಾಜ<br>– ಡಾ. ಬಿ.ಎಸ್. ಪದ್ಮ | 19–29 |
| 4. | ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಚಾಮರಾಜನಗರ ಜಿಲ್ಲೆಯ ಜಾತ್ರೆಗಳ<br>ಪಾತ್ರ: ಒಂದು ಅವಲೋಕನ – ಕರಿಬಸಪ ಎನ್<br>– ಡಾ. ನಾಗರತ್ನಮ್ಮ ಎಸ್ | 30–41 |
| 5. | ಬಸವಣ್ಣನವರ ಸಾಮಾಜಿಕ ಸುಧಾರಣೆ ಮತ್ತು ಮಂಗಳವೇಡೆ<br>– ಡಾ. ಎಸ್. ಬಿ. ರಾಠೋಡ | 42–48 |
| 6. | ಭಾರತದಲ್ಲಿ ವೃತ್ತಿಪರ ಸಮಾಜಕಾರ್ಯ ಶಿಕ್ಷಣದ ಬೆಳವಣಿಗೆ: ಒಂದು ಅವಲೋಕನ<br>– ಶ್ರೀ ರಾಜೇಂದ್ರ ಪ್ರಸಾದ ಆಸಂಗಿ | 49–53 |
| 7. | ಮಾಗಡಿ ತಾಲೂಕಿನ ಮಲವರಪಾಳ್ಯದ ಬೀರಲಿಂಗೇಶ್ವರ ದೇವಾಲಯ: ಒಂದು<br>ಅಧ್ಯಯನ – ಸುಷ್ಮಾ ಹೆಚ್<br>– ಡಾ. ನಾಗರತ್ನಮ್ಮ ಎಸ್ | 54–61 |
| 8. | ಭಾಗೀರಥಿ ಹೆಗಡೆಯವರ ಗುಬ್ಬಿಯ ಸ್ವರ್ಗ ಮಕ್ಕಳ ಕವನ ಸಂಕಲನದ ವಿಮರ್ಶೆ<br>– ಕೆ. ಶಿವಲಿಂಗಪ್ಪ ಹಂದಿಹಾಳು | 62–66 |
| 9. | ಕುವೆಂಪುರವರ ಶ್ಮಶಾನ ಕುರುಕ್ಷೇತ್ರ ನಾಟಕ: ವಿಮರ್ಶಾತ್ಮಕ ಅಧ್ಯಯನ<br>– ಬಸಪ್ಪ ಚನ್ನಪ್ಪ ಹೆಬ್ಬಾಳ | 67–73 |
| 10. | ಶಾಕ್ತ ತತ್ವಪಂಥದ ಭೂಮಿಕೆಯಲ್ಲಿ ಅರಳಿದ 'ಸಮಗಾರ ಭೀಮವ್ವ' ಕವಿತೆ<br>– ರತ್ನಾಕರ ಸಿ | 74–86 |
| 11. | ಸರ್ವಜ್ಞನ ದೃಷ್ಟಿಯಲ್ಲಿ ಮಾದರಿ ಗುರು–ಶಿಷ್ಯರು: ಕೆಲವು ತ್ರಿಪದಿಗಳ ಅವಲೋಕನ<br>– ಶಿವಾನಂದ ಹಿರೇಮಠ | 87–92 |
| 12. | ಸಂತ ಶಿಶುನಾಳ ಶರೀಫರ ತತ್ವಪದಗಳಲ್ಲಿ ಸಾಮಾಜಿಕ ಮತ್ತು ರಾಜಕೀಯ ಪ್ರಜ್ಞೆ<br>– ದಯಾನಂದ | 93–98 |
| 13. | ಗ್ರಾಮ ಪಂಚಾಯತಿಗಳಲ್ಲಿ ರಚಿಸಬೇಕಾಗಿರುವ ಸ್ಥಾಯಿ ಸಮಿತಿಗಳು ಮತ್ತು<br>ಉಪಸಮಿತಿಗಳು: ರಚನೆ ಮತ್ತು ಪ್ರಕಾರ್ಯಗಳು – ಡಾ. ಹೇಮಾಂಬರ ಎಚ್.ಎಸ್ | 99–103 |
| 14. | ಶತಮಾನ ಪೂರೈಸಿದ ಅಂತರಾಷ್ಟ್ರೀಯ ಕಾರ್ಮಿಕ ಸಂಘ ಮತ್ತು ಆಧುನಿಕ<br>ಶತಮಾನದ ಕಾರ್ಮಿಕರ ಸಮಸ್ಯೆಗಳು – ಡಾ. ಜಿ.ಎಸ್. ಚಿಣಗಿ | 104–107 |

ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-1 Issue 6, May-June 2020
©*IIMRD*, Mysuru

IIMRD JOURNALS
www.iimrd.com

# ಬಸವಣ್ಣನವರ ಸಾಮಾಜಿಕ ಸುಧಾರಣೆ ಮತ್ತು ಮಂಗಳವೇಡೆ

ಡಾ. ಎಸ್. ಬಿ. ರಾಠೋಡ[1]

## ಪೀಠಿಕೆ

*ಬುದ್ಧ ಬಂದ ಬುದ್ಧ ಹೋದ ಶುದ್ಧವಾಗಲಿಲ್ಲ ಜಗತ್ತು*
*ಬಸವ ಬಂದ ಬಸವ ಹೋದ ಹಸುನ ಬೀರಲಿಲ್ಲ ಜಗತ್ತು*
*ಗಾಂಧಿ ಬಂದ ಗಾಂಧಿ ಹೋದ ಸುಗಂಧ ಬೀರಲಿಲ್ಲ ಜಗತ್ತು*

ಎಂಬ ಕವಿವಾಣಿಯಂತೆ ಆಯಾ ಕಾಲಘಟ್ಟದಲ್ಲಿ ಹುಟ್ಟಿದ ಯುಗಪುರುಷರಾದ ಬುದ್ಧ, ಬಸವ, ಗಾಂಧಿ ಇವರೆಲ್ಲರು ತಮ್ಮ ಅಸ್ಮೀತೆಯಲ್ಲಿ ಆರಾಮದಾಯಕ ಜೀವನ ಸಾಗಿಸಬಹುದಾಗಿತ್ತು. ಆದರೂ ಲೋಕ ಕಲ್ಯಾಣಕ್ಕಾಗಿ ತಮ್ಮ ಆರಾಮದಾಯಕ ಜೀವನಕ್ಕೆ ಪೂರ್ಣ ವಿರಾಮವಿತ್ತರು. ಆಯಾ ಕಾಲಘಟ್ಟದಲ್ಲಿ ಹದಗೆಟ್ಟ ಸಮಾಜದ ಸ್ವಾಸ್ಥ್ಯವನ್ನು ಸುಧಾರಿಸಲು ಪ್ರಯತ್ನಪಟ್ಟರು. ನಾನು, ನಾನೇ ಶ್ರೇಷ್ಠವೆಂಬ ಭ್ರಮೆಯಲ್ಲಿದ್ದವರನ್ನು, ಅಹಂ ಅಹಂಕಾರದಲ್ಲಿದ್ದವರನ್ನು ತಿದ್ದಲು ಪ್ರಯತ್ನಪಟ್ಟರು. ಮೇಲು-ಕೀಳು, ಬಡವ-ಬಲ್ಲಿದ, ದೀನ-ದಲಿತ, ಹೀಗೆ ಎಲ್ಲ ವರ್ಗದವರಿಗೆ ನ್ಯಾಯ ಒದಗಿಸಲು ಹಲವಾರು ಹೊಸ ಮಾರ್ಗೋಪಾಯವನ್ನು ಹುಡುಕಿದರು. ಬುದ್ಧನ ಮಾರ್ಗಪಥದಲ್ಲಿ ಬಸವಣ್ಣನವರು ಸಮಾಜದಲ್ಲಿ ಅಂಟಿದ ಜಿಡ್ಡು, ಬುಡದಿಂದ ಕಿತ್ತೊಗೆಯಲು ಹರಸಹಾಸಪಟ್ಟರು. ಅದರ್ಮಿಗಳಿಗೆ ಧರ್ಮದ ಮೂಲ ನೆಲೆಯನ್ನು ತೋರಿಸಿದರು "ದಯವೇ ಧರ್ಮದ ಮೂಲವಯ್ಯಾ" ಎಂದು ಸಾರಿ ಹೇಳಿದ ಮಹಾನ್ ಸಮಾಜ ಸುಧಾರಕ, ಯುಗ ಪರಿವರ್ತಕ ಅಣ್ಣ ಬಸವಣ್ಣ.

## ಬಸವಣ್ಣನವರ ಬಾಲ್ಯ ಮತ್ತು ಕ್ರಾಂತಿ

ಮಾದರಸ ಮಾದಲಾಂಬಿಕೆಯರ ಉದರದಲ್ಲಿ ಮೂರನೆಯ (ಈತನ ಅಣ್ಣ ದೇವರಾಜ, ಅಕ್ಕ ನಾಗಲಾಂಬಿಕೆ) ಮಗನಾಗಿ ಬಾಗೇವಾಡಿಯ ಇಂಗಳೇಶ್ವರ ಗ್ರಾಮದಲ್ಲಿ ಜನಿಸುತ್ತಾರೆ. ಇವರ ಹೂಟ್ಟೂರಿನ ಕುರಿತು ಹಲವಾರು ಭಿನ್ನ ವಿಚಾರಗಳಿವೆ. ಬೆಳಗಾವಿಯ ಹಿರೇಬಾಗೇವಾಡಿ, ಹುಕ್ಕೇರಿ

---

[1] *ಸಹಾಯಕ ಪ್ರಾಧ್ಯಾಪಕರು ಮತ್ತು ಸಂಶೋಧನಾ ಮಾರ್ಗದರ್ಶಕರು, ಎಸ್. ಎಸ್. ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯ, ಚಡಚಣ-586205*